CCE-II-RR/PR/PF/NSR/NSPR(A)/888/4012

**A**

# ಜೂನ್ 2024 ರ ಪರೀಕ್ಷೆ - 2
# JUNE 2024 EXAMINATION - 2

Question Paper Serial No.

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**CCE RR/PR/PF/ NSR/NSPR**

**ಸಂಕೇತ ಸಂಖ್ಯೆ : 62-K**
**Code No. : 62-K**

## ವಿಷಯ : ತೃತೀಯ ಭಾಷೆ — ಕನ್ನಡ
## Subject : Third Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 15. 06. 2024 ] [ Date : 15. 06. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-15 A.M. to 1-15 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ***ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**15. 06. 2024**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** **8 × 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ಸ್ವರಗಳ ಸಂಖ್ಯೆ

(ಎ) ೪೯

(ಬಿ) ೨೫

(ಸಿ) ೧೩

(ಡಿ) ೦೯

2. 'ಮನೆ' – ಪದದ ಬಹುವಚನ ರೂಪ

(ಎ) ಮನೆಗಳು

(ಬಿ) ಮರ

(ಸಿ) ಮರಗಳು

(ಡಿ) ಮಠ

3. ಕೆಳಗಿನವುಗಳಲ್ಲಿ ಲೋಪ ಸಂಧಿಗೆ ಉದಾಹರಣೆಯಾಗಿರುವ ಪದ

(ಎ) ದೇವಾಲಯ

(ಬಿ) ನಾವೆಲ್ಲರೂ

(ಸಿ) ನವೋದಯ

(ಡಿ) ಸದಭಿರುಚಿ

4. ಕೆಳಗಿನವುಗಳಲ್ಲಿ ದ್ವಿರುಕ್ತಿಗೆ ಉದಾಹರಣೆಯಾಗಿರುವ ಪದ

(ಎ) ಧಗಧಗ

(ಬಿ) ಬೇಗಬೇಗ

(ಸಿ) ಕೈಕೊಡು

(ಡಿ) ಮನೆಮಠ

5. ಶಿಕ್ಷಕರು ಶಾಲೆಯ ಪ್ರತಿ ವಿದ್ಯಾರ್ಥಿಗೆ ಒಂದೊಂದು ಪುಸ್ತಕವನ್ನು ಕೊಟ್ಟರು. – ಈ ವಾಕ್ಯದಲ್ಲಿ 'ಪುಸ್ತಕವನ್ನು' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ

(ಎ) ಪ್ರಥಮಾ ವಿಭಕ್ತಿ

(ಬಿ) ದ್ವಿತೀಯಾ ವಿಭಕ್ತಿ

(ಸಿ) ಪಂಚಮೀ ವಿಭಕ್ತಿ

(ಡಿ) ಸಪ್ತಮೀ ವಿಭಕ್ತಿ

6. ಕೆಳಗಿನವುಗಳಲ್ಲಿ ಇಂಗ್ಲಿಷಿನಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದ

(ಎ) ಕಾಗದ

(ಬಿ) ಸಾಬೂನು

(ಸಿ) ಟಿಕೆಟ್

(ಡಿ) ಆಕಾಶ

7. ವಿದ್ಯಾರ್ಥಿಗಳು ಶಾಲೆಯಲ್ಲಿ ಹಾಲನ್ನು ಕುಡಿಯುತ್ತಾರೆ. ಈ ವಾಕ್ಯವು

(ಎ) ಸಾಮಾನ್ಯ ವಾಕ್ಯ

(ಬಿ) ಮಿಶ್ರವಾಕ್ಯ

(ಸಿ) ಸಂಯೋಜಿತ ವಾಕ್ಯ

(ಡಿ) ಅಲಂಕಾರಿಕ ವಾಕ್ಯ

8. ಒಬ್ಬರು ಹೇಳಿದ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

(ಎ) ಭಾವಸೂಚಕ

(ಬಿ) ಪೂರ್ಣವಿರಾಮ

(ಸಿ) ಅರ್ಧವಿರಾಮ

(ಡಿ) ಉದ್ಧರಣ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ:** **4 × 1 = 4**

9. ತಿರುಮಲಾಂಬ : ನಂಜನಗೂಡು :: ಆರ್. ಕಲ್ಯಾಣಮ್ಮ : ........................ .

10. ಗುಂಡಪ್ಪನವರ ತಿಮ್ಮ : ಸೂರ್ಯ :: ಬೀಚಿಯವರ ತಿಂಮ : ........................ .

11. ಕಣ್‌ದಿಟ್ಟಿ ಹರಿದತ್ತ : ಗ್ರಂಥಗಿರಿ ಪಂಕ್ತಿಗಳು :: ನಿಂತು ಬೆರಗೀಯುತಿವೆ : .................. .

12. ಆಚಾರವೇ : ಸ್ವರ್ಗ :: ಅನಾಚಾರವೇ : ........................ .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 × 1 = 4**

13. ಸಂಧ್ಯಾರಾಗ ಕೃತಿಯನ್ನು ಬರೆದವರು ಯಾರು ?

14. ನವೀನ ಯುಗದ ಕೇತನ ಯಾವುದು ?

15. ಕವಿ ಸೋಮನಾಥನು ಯಾರನ್ನು ದೊಡ್ಡ ಮನುಷ್ಯನೆಂದು ಹೆಸರಿಸಲಾಗುವುದಿಲ್ಲ ಎಂದಿದ್ದಾನೆ ?

16. ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದ್ದೇಕೆ ?

18. ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?

19. ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿರಿ.

20. ಈಗಿನ ವಿದ್ಯಾರ್ಥಿಗಳು ಪುಣ್ಯವಂತರು ಎಂದು ಬೀಚಿಯವರು ಹೇಳಲು ಕಾರಣವೇನು ?

21. ಯುವಜನತೆಯ ಮಂದಿರ ಯಾವುದು ? ಅಲ್ಲಿ ಯಾರಿಗೆ ಸ್ವಾಗತವಿದೆ ?

22. ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರ ಯಾವುದು ?

23. ಬಸವಣ್ಣನವರು ಹೇಳಿರುವಂತೆ ಅಂತಃಶುದ್ಧಿಯನ್ನು ಕಾಪಾಡಿಕೊಳ್ಳುವುದು ಹೇಗೆ ? ನಿಮ್ಮ ಮಾತುಗಳಲ್ಲಿ ಅಭಿವ್ಯಕ್ತಪಡಿಸಿರಿ.

24. ಧರ್ಮಪದನು ತನ್ನ ಭಾವನೆಗಳನ್ನು ಏಕೆ ಹತ್ತಿಕ್ಕಿಕೊಂಡನು ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 × 3 = 6**

25. "ದೇವಿ ನನ್ನ ಅಪರಾಧವನ್ನು ಕ್ಷಮಿಸು."

26. "ಗೋಡೆಗೆ ಕಪ್ಪ ಬಳಿದ್ಹಂಗೆ."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12**

27. ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.

28. ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ನೀವು ಹೇಗೆ ಪ್ರಶಂಸಿಸುತ್ತೀರಿ ? ವಿವರಿಸಿ.

29. ನವಯುಗದ ನಿರ್ಮಾಣದಲ್ಲಿ ಯುವಜನತೆಯ ಪಾತ್ರವೇನೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

30. ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಹೇಗೆ ಚಿತ್ರಿತವಾಗಿದೆ ? ವಿವರಿಸಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

31. ಆರ್.ಎಸ್. ಸುಂಕದ

32. ಸಿ.ಪಿ.ಕೆ.

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

33. "ಮಾಡಿದ್ದು ಉಣ್ಣೋ ಮಹಾರಾಯ."

**ಅಥವಾ**

"ಹಾಸಿಗೆ ಇದ್ದಷ್ಟು ಕಾಲು ಚಾಚು."

**IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

34. ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು ? ವಿವರಿಸಿ.

**ಅಥವಾ**

ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

35. ನಾವು ..........................................................

..................................................................

..................................................................

.......................................................... ಇಂದೆ

**ಅಥವಾ**

ಕರ್ನಾಟಕ ......................................................

..................................................................

..................................................................

.......................................................... ಒಂದೆ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4**

36. ಅನೇಕ ಯುದ್ಧವೀರರು ಮತ್ತು ದಾನವೀರರು ನಮ್ಮ ನಾಡಿನಲ್ಲಿ ಆಗಿ ಹೋಗಿದ್ದಾರೆ. ಇವರು ನಿರ್ವಹಿಸಿದ ಮಹಾಯುದ್ಧ, ಮಹಾದಾನಗಳನ್ನು ಇಲ್ಲಿನ ಅನೇಕ ಕಾವ್ಯಗಳು, ಶಾಸನಗಳು ಕೈಯೆತ್ತಿ ಸಾರುತ್ತಿವೆ. ಇವರಲ್ಲಿ ಅತ್ತಿಮಬ್ಬೆ ಸುಪ್ರಸಿದ್ಧ ಮಹಿಳೆ.

ಅತ್ತಿಮಬ್ಬೆ ಬಾಳಿದುದು ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ. ಆಗ ಕರ್ನಾಟಕವನ್ನು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ತೈಲಪನು ಆಳುತ್ತಿದ್ದನು. ಇವನ ದಂಡನಾಯಕ ಮಲ್ಲಪ್ಪಯ್ಯನ ಮಗಳಾಗಿ ಅತ್ತಿಮಬ್ಬೆ ಜನಿಸಿದಳು. ಈತನ ಇನ್ನಿಬ್ಬರು ಹೆಣ್ಣುಮಕ್ಕಳೆಂದರೆ ಗುಂಡಮಬ್ಬೆ ಮತ್ತು ನಾಗಿಯಬ್ಬೆ.

ದೊರೆ ತೈಲಪನಲ್ಲಿ ಮಹಾಮಂತ್ರಿಯಾಗಿ ಧಲಪಯ್ಯನು ಕಾರ್ಯನಿರ್ವಹಿಸುತ್ತಿದ್ದನು. ಈತನ ಮಗ ನಾಗದೇವನು ಅತ್ತಿಮಬ್ಬೆ ಮತ್ತು ಗುಂಡಮಬ್ಬೆ ಇಬ್ಬರನ್ನು ಮದುವೆಯಾದನು. ಕಾಲಕಳೆದಂತೆ ದಂಪತಿಗಳು ಸುಖವಾಗಿ ಬಾಳತೊಡಗಿದರು. ನಾಗದೇವನು ಯುದ್ಧದಲ್ಲಿ ಹೋರಾಡಿ ವೀರಮರಣ ಹೊಂದಿದಾಗ ತಂಗಿ ಗುಂಡಮಬ್ಬೆ ಗಂಡನ ಶವವನ್ನು ಅಪ್ಪಿಕೊಂಡು ಸತಿ ಹೋದಳು. ಎಳೆಯ ಬಾಲಕನಾಗಿದ್ದ ಅಣ್ಣಿಗ್ಗದೇವನ ಪಾಲನೆಗಾಗಿ ಅತ್ತಿಮಬ್ಬೆ ನಿಲ್ಲಬೇಕಾಯಿತು.

ಅತ್ತಿಮಬ್ಬೆ ಸುಮಾರು 1500 ಜಿನ ದೇವಾಲಯಗಳನ್ನು ನಿರ್ಮಿಸಿದಳು. ಅಲ್ಲದೆ ಅವಳು ಸಾಹಿತ್ಯ ಪ್ರಿಯಳೂ ಆಗಿದ್ದಳು. ಇವಳು ಕವಿ ಚಕ್ರವರ್ತಿ ರನ್ನನಿಗೆ ಆಶ್ರಯ ನೀಡಿ 'ಅಜಿತನಾಥ ಪುರಾಣ'ವನ್ನು ಬರೆಯಿಸಿದಳು. ಈ ಪುರಾಣದಲ್ಲಿ ರನ್ನನು ಅತ್ತಿಮಬ್ಬೆಯನ್ನು ಜಿನಧರ್ಮಪತಾಕೆ, ದಾನಚಿಂತಾಮಣಿ ಎಂದು ಕೊಂಡಾಡಿದ್ದಾನೆ. ಇವಳು ಪೊನ್ನನಿಂದ 'ಶಾಂತಿಪುರಾಣ' ಎಂಬ ಕೃತಿಯನ್ನು ಬರೆಯಿಸಿ, ಅದರ ಒಂದು ಸಾವಿರ ಪ್ರತಿ ಮಾಡಿಸಿ ಬಸದಿಗಳಿಗೆ ಗುಡಿಗಳಿಗೆ ದಾನ ಮಾಡಿದಳು.

ಹೀಗೆ ಅತ್ತಿಮಬ್ಬೆ ದಾನ, ಧರ್ಮ ಸಾಹಿತ್ಯ ಮೊದಲಾದ ಮಹಾಕಾರ್ಯಗಳನ್ನು ಮಾಡಿ ಕನ್ನಡನಾಡಲ್ಲಿ ಪ್ರಸಿದ್ಧಿ ಪಡೆದಿದ್ದಾಳೆ.

**<u>ಪ್ರಶ್ನೆಗಳು :</u>**

ಎ) ಮಲ್ಲಪ್ಪಯ್ಯನ ಹೆಣ್ಣುಮಕ್ಕಳ ಹೆಸರುಗಳೇನು ?

ಬಿ) ಗುಂಡಮಬ್ಬೆ ಸತಿಹೋಗಲು ಕಾರಣವೇನು ?

ಸಿ) ಕವಿಚಕ್ರವರ್ತಿ ರನ್ನ ಅತ್ತಿಮಬ್ಬೆಯನ್ನು ಏನೆಂದು ಕೊಂಡಾಡಿದ್ದಾನೆ ?

ಡಿ) ಅತ್ತಿಮಬ್ಬೆ ಕನ್ನಡನಾಡಲ್ಲಿ ಪ್ರಸಿದ್ಧಿ ಪಡೆಯಲು ಕಾರಣವೇನು ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **1 × 4 = 4**

37. ಗಣಕಯಂತ್ರ

**ಅಥವಾ**

ಗ್ರಂಥಾಲಯದ ಪ್ರಯೋಜನಗಳು

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** **1 × 5 = 5**

38. ನಿಮ್ಮನ್ನು ಬೆಳಗಾವಿಯ ನಿವಾಸಿ 'ಆಕಾಶ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಆಚರಿಸಿದ ರಾಜ್ಯೋತ್ಸವದ ಕುರಿತು ಮೈಸೂರಿನಲ್ಲಿರುವ ನಿಮ್ಮ ಅಣ್ಣನಿಗೆ ಒಂದು ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಜಯ್' ಎಂದು ಭಾವಿಸಿಕೊಂಡು, ಮುಂದಿನ ಶಿಕ್ಷಣಕ್ಕಾಗಿ ವರ್ಗಾವಣೆಪತ್ರ ನೀಡುವಂತೆ ಕೋರಿ, ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

DO NOT WRITE ANYTHING HERE